ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು):

ಅ) ಸದರಿ ಕಾಮಗಾರಿಯು 2001–2002 ಮತ್ತು 2002–2003ನೇ ಸಾಲಿನಲ್ಲಿ ನಡೆದಿದೆ.

ಆ) ರೈತಕಾಯಕ ಕೆರೆ ಕಾರ್ಯಕ್ರಮದ ಸಾಂಕೇತಿಕ ಉದ್ಘಾಟನೆಯನ್ನು ಅಂದಿನ ಮುಖ್ಯಮಂತ್ರಿಗಳು ಸವಳಂಗ ಕೆರಯಂಗಳದಲ್ಲಿ ದಿ:30.11.01 ರಂದು ನೆರವೇರಿಸಿದರು. ಈ ಉದ್ಘಾಟನೆ ಕಾರ್ಯಕ್ರಮಕ್ಕೆ ಒಟ್ಟು ರೂ.9.10ಲಕ್ಷ ಖರ್ಚಾಗಿದೆ.

ಇ) ರೂ.50.00ಲಕ್ಷಗಳು

ಈ) ಈ ಕಾಮಗಾರಿಗೆ ಈವರೆಗೆ ರೂ.15.15ಲಕ್ಷ ನಗದು ಹಾಗೂ 157 ಮೆಟ್ರಿಕ್ ಟನ್ ಆಹಾರಧಾನ್ಯ. ಬಿಡುಗಡೆಯಾಗಿದ್ದು (ಮೊತ್ತ ರೂ.9.81 ಲಕ್ಷ) ಒಟ್ಟು 24.96ಲಕ್ಷ ಆಗಿರುತ್ತದೆ. ಕೆರೆಯಲ್ಲಿನ 1,33,400 ಘನ ಮೀ.ನಷ್ಟು ಹೂಳನ್ನು ತೆಗೆಯಲಾಗಿದೆ.

ಉ) ರೂ.25.04ಲಕ್ಷಗಳು

ಊ) ಈ ಕಾಮಗಾರಿಗಳನ್ನು ಪೂರ್ಣಗೊಳಿಸಲು ಕರ್ನಾಟಕ ಭೂಸೇನಾ ನಿಗಮಕ್ಕೆ ವಹಿಸಲಾಗಿದೆ.

337 (420) ಶ್ರೀಮತಿ ಶಕುಂತಲಾ ಟಿ.ಶೆಟ್ಟಿ (ಪುತ್ತೂರು):– ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈವರೆಗೆ ನಿರ್ಮಿಸಿರುವ ಕಿಂಡಿ ಅಣೆಕಟ್ಟುಗಳು ಎಷ್ಟು;

ಆ) ಆ ಅಣೆಕಟ್ಟುಗಳು ಸುಸ್ಥಿತಿಯಲ್ಲಿವೆಯೇ;

ಇ) ಅವುಗಳಲ್ಲಿ ರೈತರು ಉಪಯೋಗಿಸುತ್ತಿರುವ ಕಿಂಡಿ ಅಣೆಕಟ್ಟುಗಳು ಎಷ್ಟು?

ಈ) ಅಣೆಕಟ್ಟುಗಳ ದುರಸ್ಥಿ/ಪುನರ್ ನಿರ್ಮಾಣ ಅಗತ್ಯವಿರುವ ಕಿಂಡಿ ಅಣೆಕಟ್ಟು ಎಷ್ಟು?

ಉ) ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಊ) ಇವುಗಳ ನೀರಿನ ಮಟ್ಟವನ್ನು ಹೆಚ್ಚಿಸುವ ಸಲುವಾಗಿ ಹೊಸದಾಗಿ ಕಿಂಡಿ ಅಣೆಕಟ್ಟು ನಿರ್ಮಿಸಲಾಗುವುದೇ?

ಋ) ಈ ಬಗ್ಗೆ ದಕ್ಷಿಣ ಕನ್ನಡ ಜಿಲ್ಲೆಗೆ ನಿಗಧಿ ಪಡಿಸಿದ ಮೊತ್ತ ಎಷ್ಟು? (ಕ್ಷೇತ್ರವಾರು ಮೊತ್ತ ಎಷ್ಟು)?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲ ಸಂಪನ್ಮೂಲ ಮತ್ತು ಸಾರಿಗೆ):

ಅ) 33.

ಆ) 27 ಅಣೆಕಟ್ಟುಗಳು ಸುಸ್ಥಿತಿಯಲ್ಲಿವೆ.

ಇ) 25.

ಈ) 17

ಉ) 2003–04ನೇ ಸಾಲಿನಲ್ಲಿ 3 ಕಿಂಡಿ ಅಣೆಕಟ್ಟುಗಳ ದುರಸ್ಥಿಯನ್ನು ಕೈಗೊಳ್ಳಲಾಗಿದ್ದು, ಬಾಕಿ ಕಿಂಡಿ ಅಣೆಕಟ್ಟುಗಳ-ದುರಸ್ಥಿಯನ್ನು ಅನುದಾನ ಲಭ್ಯತೆ ಮೇರೆಗೆ ಪರಿಶೀಲಿಸಿ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

ಊ) ಇಲ್ಲ.

ಋ) ಉದ್ಭವಿಸುವುದಿಲ್ಲ.

338 (421) ಶ್ರೀಮತಿ ಶಕುಂತಲಾ ಟಿ.ಶೆಟ್ಟಿ (ಪುತ್ತೂರು):– ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕಾನೂನು ವೃತ್ತಿ ನಿರ್ವಹಿಸುತ್ತಿರುವ ಮಹಿಳಾ ನ್ಯಾಯವಾದಿಗಳ ಸಂಖ್ಯೆ ಎಷ್ಟು (ಜಿಲ್ಲವಾರು ವಿವರ ನೀಡುವುದು):

ಆ) ಈ ಮಹಿಳಾ ವಕೀಲರುಗಳಿಗೆ ಸರ್ಕಾರ ನೀಡುತ್ತಿರುವ ವಿಶೇಷ ಸೌಲತ್ತುಗಳೇನು?

ಇ) ಮಹಿಳಾ ವಕೀಲಿ ವೃತ್ತಿ ನಡೆಸುವ ಯುವ ತರಬೇತುದಾರ ಮಹಿಳೆಯರಿಗೆ ಸ್ಟೈಫೆಂಡ್ ನೀಡುವ ಪ್ರಸ್ತಾಪ ಸರ್ಕಾರದ ಮುಂದಿದೆಯೇ?

ಈ) ಇದ್ದಲ್ಲಿ ಎಷ್ಟು ಸಂಭಾವನೆಯನ್ನು ನೀಡಲಾಗುವುದು:

ಉ) ಯಾವಾಗ ನೀಡಲು ಉದ್ದೇಶಿಸಲಾಗಿದೆ (ವಿವರಗಳನ್ನು ನೀಡಲಾಗುವುದು)

ಶ್ರೀ ಹೆಚ್.ಕೆ. ಪಾಟೀಲ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):

ಅ) 8,792 ಜಿಲ್ಲಾವಾರು ವಿವರ ತಕ್ಷಣ ಲಭ್ಯವಿಲ್ಲ. ನಂತರ ಒದಗಿಸಲಾಗುವುದು.

ಆ) ಆರ್ಥಿಕ ಸಹಾಯ ನೀಡಲಾಗುತ್ತಿದೆ.

ಇ) ಈಗಾಗಲೇ ನೀಡಲಾಗುತ್ತಿದೆ.

ಈ) ತಲಾ ಮಾಹೆಯಾನ ರೂ.1,000ಗಳ ಸಂಭಾವನೆಯನ್ನು 4ವರ್ಷಗಳು ನೀಡಲಾಗುತ್ತಿದೆ.

ಉ) ಉದ್ಭವಿಸುವುದಿಲ್ಲ.

340 (642) ಶ್ರೀಮತಿ ಶಕುಂತಲಾ ಟಿ.ಶೆಟ್ಟಿ(ಪುತ್ತೂರು):– ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳಲ್ಲಿ 2003–2004ರಲ್ಲಿ ಕೊಲೆಯಾದ ಬಂಟ್ವಾಳದ ಭಾರತಿ, ಹೆಬ್ರಿಯ ಸುಚಿತಶೆಟ್ಟಿ, ಪುತ್ತೂರಿನ ಶಮೀಮಾ, ಉಡುಪಿಯ ಡಾ: ಚಂದ್ರಕಲಾಭಕ್ತ, ಕಾರ್ಕಳದ ಜಯ ಪ್ರಕರಣದ ಅಪರಾಧಿಗಳನ್ನು ಗುರುತಿಸಲಾಗಿದೆಯೇ;

ಆ) ಈ ಬಗ್ಗೆ ಸಿ.ಓ.ಡಿ. ತನಿಖೆಗೊಳಪಟ್ಟ ಪ್ರಕರಣಗಳು ಯಾವುವು;

ಇ) ತನಿಖೆ ಯಾವ ಹಂತದಲ್ಲಿದೆ ವಿವರಗಳನ್ನು ನೀಡುವುದು?

ಶ್ರೀ ಎನ್. ಧರ್ಮಸಿಂಗ್ (ಮುಖ್ಯ ಮಂತ್ರಿಗಳು):

ಅ) 1) ಬಂಟ್ವಾಳದ ಭಾರತಿ ಪ್ರಕರಣ–ಮೃತಳು ನೇತ್ರಾವತಿ ನದಿಯಲ್ಲಿ ಬಿದ್ದು ಆತ್ಮಹತ್ಯೆ ಮಾಡಿಕೊಂಡಿರುತ್ತಾರೆ.

2) ಹೆಬ್ರಿಯ ಸುಚಿತಶೆಟ್ಟಿ ಪ್ರಕರಣ–ಈ ಪ್ರಕರಣದಲ್ಲಿ ಇಬ್ಬರು ಸಂಶಯಯುತ ಆರೋಪಿಗಳನ್ನು, ಪಿ–300 ಪರೀಕ್ಷೆಗೆ ಒಳಪಡಿಸಲಾಗಿದೆ.